

ಎನ್. ಜಗನ್ನಾಥ ಪ್ರಕಾಶ್

# ರೇಸ್

## ಕಪ್ಪು ವರ್ಣೀಯನೊಬ್ಬನ ಓಟ–ಹೋರಾಟ

ನೂರಾ ಇಪ್ಪತ್ತು ವರ್ಷಗಳ ಹಿಂದೆ ಆರಂಭವಾದ ಒಲಿಂಪಿಕ್ಸ್‌ನಲ್ಲಿ ಅನೇಕ ಕ್ರೀಡಾಪಟುಗಳು ತಮ್ಮ ಸಾಮಾರ್ಥ್ಯ ತೋರುವಲ್ಲಿ ಯಶಸ್ವಿಯಾಗಿದ್ದಾರೆ. ಅದರಲ್ಲಿ ದಾಖಲೆ ಮಾಡಿದ ಕರಿಯ ಓಟಗಾರನ ಬದುಕಿನ ಕತೆಯನ್ನು ಆಧರಿಸಿ ಮಾಡಲಾದ ಸಿನಿಮಾ ಒಂದರ ಕುರಿತ ಬರಹ ಇಲ್ಲಿದೆ.

ಕ್ರೀಡಾಲೋಕದ ವಿಜಯ ವೀರರ ಬದುಕು–ಸಾಧನೆ ಆಧರಿಸಿದ ಚಲನಚಿತ್ರಗಳ ತಯಾರಿಕೆ ಚಿತ್ರ ಜಗತ್ತಿಗೆ ಹೊಸದೂ ಅಲ್ಲ, ಅಪರೂಪವೂ ಅಲ್ಲ. ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ವಿಕ್ರಮ ಸಾಧಿಸಿದವರ ಅನೇಕ ಚಿತ್ರಗಳು ವಿಶ್ವದ ಹಲವಾರು ಭಾಷೆಗಳಲ್ಲಿ ನಾಲ್ಕೈದು ದಶಕಗಳಿಂದ ಬೆಳ್ಳಿತೆರೆಯಲ್ಲಿ ಸ್ಥಳ ಪಡೆದುಕೊಳ್ಳುತ್ತಿವೆ.

ಜೆಸ್ಸಿ ಓವನ್ಸ್– ಒಂದೇ ಒಲಿಂಪಿಕ್ಸ್‌ನಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡ ಅಪ್ರತಿಮ ಕ್ರೀಡಾಪಟು. ಆಟೋಟಗಳ ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿಯುವಂತಹ ಸಾಧನೆ ಮಾಡಿದ ಜೆಸ್ಸಿ ಕುರಿತಂತೆ ಹತ್ತಾರು ಚಲನಚಿತ್ರಗಳು, ಸಾಕ್ಷ್ಯಚಿತ್ರಗಳು ಈಗಾಗಲೇ ಬಂದು ಹೋಗಿವೆ.

2016 ಒಲಿಂಪಿಕ್ಸ್ ವರ್ಷ. ಆಟ ಪ್ರವೀಣರ ಕುರಿತಂತೆ ಒಂದೆರಡು ಚಿತ್ರಗಳು ಬರುವ ನಿರೀಕ್ಷೆಯ ಹಿನ್ನೆಲೆಯಲ್ಲಿಯೇ 'ರೇಸ್' ಚಿತ್ರ ಬಿಡುಗಡೆಗೊಂಡಿದೆ– ಇದು ಜೆಸ್ಸಿ ಓವೆನ್ಸ್ ಬಗೆಗಿನ ಇನ್ನೊಂದು ಚಿತ್ರ.

ಒಂದನೂರ ಇಪ್ಪತ್ತು ವರ್ಷಗಳ ಹಿಂದೆ (1896) ಶುರುವಾದ ಆಧುನಿಕ ಒಲಿಂಪಿಕ್ಸ್ ಆಂದೋಲನಕ್ಕೆ ಅಮೆರಿಕದ ಲಾಸ್ ಏಂಜಲೀಸ್ ಮಹತ್ತರ ಬದಲಾವಣೆಗಳನ್ನು ತಂದುಕೊಟ್ಟ